Be Internet

# Smart

ನೀವು ಆನ್‌ಲೈನ್‌ನಲ್ಲಿ ಜಾಣತನದಿಂದ ಇರಲು ಸಹಾಯ ಮಾಡುವುದಕ್ಕಾಗಿ ಸಲಹೆಗಳು



## ಸಲಹೆ 1

**ಆನ್‌ಲೈನ್‌ನಲ್ಲೂ IRL (ಇನ್ ರಿಯಲ್ ಲೈಫ್ - ನಿಜ ಜೀವನದಲ್ಲಿ) ಹಾಗೆಯೇ ಸಕಾರಾತ್ಮಕ ವ್ಯಕ್ತಿತ್ವ ಉಳ್ಳವರಾಗಿರಿ.**

ನೆನಪಿಡಿ, ನಿಮ್ಮಿಂದ ಅಥವಾ ನಿಮ್ಮ ಬಗ್ಗೆ ಆನ್‌ಲೈನ್‌ನಲ್ಲಿ ಫೋಟೋ, ಕಾಮೆಂಟ್ ಅಥವಾ ಸಂದೇಶದಂತಹ ಯಾವುದೇ ವಿಷಯ ಒಮ್ಮೆ ಬಂದರೆ, ಅದು ಆನ್‌ಲೈನ್‌ನಲ್ಲಿ ಶಾಶ್ವತವಾಗಿ ಉಳಿದುಕೊಳ್ಳಬಹುದು.

## ಸಲಹೆ 2

**ಪೋಸ್ಟ್ ಮಾಡುವ ಮೊದಲು ಆಲೋಚಿಸಿ.**

ಯಾವ ಸಂದರ್ಭದಲ್ಲಿ ಏನನ್ನೂ ಪೋಸ್ಟ್ ಮಾಡದಿರುವುದು – ಅಂದರೆ ಒಬ್ಬರ ಪೋಸ್ಟ್, ಫೋಟೋ ಅಥವಾ ಕಾಮೆಂಟ್‌ಗೆ ಪ್ರತಿಕ್ರಿಯಿಸದಿರುವುದು ಅಥವಾ ನಿಜವಲ್ಲದ ಯಾವುದೇ ವಿಷಯವನ್ನು ಹಂಚಿಕೊಳ್ಳದಿರುವುದೇ ಉತ್ತಮ ಎಂದು ಸಹ ತಿಳಿದಿರುವುದು ಒಳ್ಳೆಯದು.

## ಸಲಹೆ 3

**ನಿಮ್ಮ ರಹಸ್ಯಗಳನ್ನು ಸುರಕ್ಷಿತವಾಗಿರಿಸಿ.**

ನಿಮ್ಮ ವಿಳಾಸ, ಇಮೇಲ್, ಫೋನ್ ಸಂಖ್ಯೆ, ಪಾಸ್‌ವರ್ಡ್‌ಗಳು, ಬಳಕೆದಾರರ ಹೆಸರುಗಳು ಅಥವಾ ಶಾಲಾ ಡಾಕ್ಯುಮೆಂಟ್‌ಗಳನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳಬೇಡಿ.

## ಸಲಹೆ 4

**ಆನ್‌ಲೈನ್‌ನಲ್ಲಿ ಜನರು ನಿಮ್ಮನ್ನು ಯಾವ ದೃಷ್ಟಿಕೋನದಿಂದ ನೋಡುತ್ತಾರೆ ಎಂದು ನೀವು ಅಂದುಕೊಳ್ಳುತ್ತೀರೋ, ಅವರು ಅದೇ ದೃಷ್ಟಿಕೋನದಿಂದ ನೋಡುತ್ತಾರೆ ಎಂದು ಭಾವಿಸಬೇಡಿ.**

ಬೇರೆ ಬೇರೆ ಜನರು ಒಂದೇ ಮಾಹಿತಿಯನ್ನು ನೋಡಿ ಅದರಿಂದ ಬೇರೆ ಬೇರೆ ರೀತಿಯ ತೀರ್ಮಾನಗಳನ್ನು ಮಾಡಬಹುದು.

## ಸಲಹೆ 5

**ಗೌಪ್ಯತೆಯ ವಿಚಾರದಲ್ಲಿ ನಿಮ್ಮ ಆಯ್ಕೆಗಳು ಮತ್ತು ಇತರರ ಆಯ್ಕೆಗಳ ನಡುವೆ ಸಾಮ್ಯತೆ ಇರದಿದ್ದರೂ, ಇತರರ ಆಯ್ಕೆಗಳನ್ನು ಯಾವಾಗಲೂ ಗೌರವಿಸುವುದು ಮುಖ್ಯವಾಗಿದೆ.**

ಆನ್‌ಲೈನ್‌ನಲ್ಲಿ ಮತ್ತು ಆಫ್‌ಲೈನ್‌ನಲ್ಲಿ, ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರತಿಕ್ರಿಯೆಗಳ ಅಗತ್ಯವಿರುತ್ತದೆ.

Be Internet

# Strong

ನೀವು ಆನ್‌ಲೈನ್‌ನಲ್ಲಿ ಸದೃಢವಾಗಿರಲು ಸಹಾಯ ಮಾಡುವುದಕ್ಕಾಗಿ ಸಲಹೆಗಳು



## ಸಲಹೆ 1

**ಸದೃಢವಾದ ಪಾಸ್‌ವರ್ಡ್ ರಚಿಸಿ.**

ಕನಿಷ್ಠ 8 ಕ್ಯಾರೆಕ್ಟರ್‌ಗಳನ್ನು ಆಯ್ಕೆ ಮಾಡಿ ಮತ್ತು ಅಕ್ಷರಗಳು (ಅಪ್ಪರ್‌ಕೇಸ್ ಮತ್ತು ಲೋವರ್‌ಕೇಸ್), ಸಂಖ್ಯೆಗಳು, ಮತ್ತು ಸಂಕೇತಗಳ ಸಂಯೋಜನೆಯನ್ನು ಬಳಸಿ.

## ಸಲಹೆ 2

**ಅದಲು-ಬದಲು ಮಾಡಿ.**

ನಿಮ್ಮ ಪ್ರತಿ ಮುಖ್ಯ ಖಾತೆಗಾಗಿ ಬೇರೆ ಬೇರೆ ಪಾಸ್‌ವರ್ಡ್ ಬಳಸಿ.

## ಸಲಹೆ 3

**ಸೃಜನಶೀಲರಾಗಿರಿ.**

ಸುಲಭವಾಗಿ ಊಹಿಸಬಹುದಾದ ಪಾಸ್‌ವರ್ಡ್ ಅಂದರೆ ನಿಮ್ಮ ಅಡ್ಡಹೆಸರು, ನಿಮ್ಮ ಶಾಲೆಯ ಹೆಸರು ಮಾತ್ರ, ಮೆಚ್ಚಿನ ಕ್ರಿಕೆಟ್ ತಂಡ, ಅಂಕಿಗಳ ಸರಣಿ (ಉದಾ., 123456), ಇತ್ಯಾದಿಗಳನ್ನು ಬಳಸಬೇಡಿ. ಮತ್ತು ಖಂಡಿತವಾಗಿಯೂ, “password” ಎಂಬ ಪದವನ್ನು ಬಳಸಬೇಡಿ!

## ಸಲಹೆ 4

**ವೈಯಕ್ತಿಕ ವಿಷಯಗಳನ್ನು ಬಳಸಬೇಡಿ.**

ನಿಮ್ಮ ಪಾಸ್‌ವರ್ಡ್‌ನಲ್ಲಿ ವೈಯಕ್ತಿಕ ಮಾಹಿತಿಯನ್ನು (ಹೆಸರು, ವಿಳಾಸ, ಇಮೇಲ್, ಫೋನ್ ಸಂಖ್ಯೆ, ಆಧಾರ್ ಸಂಖ್ಯೆ, ತಾಯಿಯ ಮೊದಲ ಹೆಸರು, ಜನ್ಮ ದಿನಾಂಕ ಇತ್ಯಾದಿ) ಅಥವಾ ಸಾಮಾನ್ಯ ಪದಗಳನ್ನು ಬಳಸಬೇಡಿ.

## ಸಲಹೆ 5

**ನಿಮ್ಮ ಪಾಸ್‌ವರ್ಡ್ ಬದಲಾಯಿಸಲು ಹಿಂಜರಿಯಬೇಡಿ.**

ವಿಶ್ವಾಸಾರ್ಹ ಹಿರಿಯರನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ನಿಮ್ಮ ಪಾಸ್‌ವರ್ಡ್ ಗೊತ್ತಾಗಿದೆ ಎಂದು ನಿಮಗೆ ತಿಳಿದರೆ ಅಥವಾ ನೀವು ಹಾಗೆ ಭಾವಿಸಿದರೆ, ತಕ್ಷಣವೇ ಆ ಪಾಸ್‌ವರ್ಡ್ ಅನ್ನು ಬದಲಾಯಿಸಿ.

Be Internet

# Alert

**ನೀವು ಆನ್‌ಲೈನ್‌ನಲ್ಲಿ ಎಚ್ಚರಿಕೆಯಿಂದ ಇರಲು ಸಹಾಯ ಮಾಡುವುದಕ್ಕಾಗಿ ಸಲಹೆಗಳು**



## ಸಲಹೆ 1

**ಸೈಟ್ ಮಾನ್ಯವಾಗಿದೆಯೇ ಎಂಬುದನ್ನು ಕೂಲಂಕಷವಾಗಿ ಪರೀಕ್ಷಿಸಿ.**

ನೀವು ಒಂದು ಲಿಂಕ್ ಅನ್ನು ಕ್ಲಿಕ್ ಮಾಡುವ ಮೊದಲು ಅಥವಾ ನೀವು ಈ ಮೊದಲು ಭೇಟಿ ನೀಡಿರದ ಒಂದು ಸೈಟ್‌ನಲ್ಲಿ ಪಾಸ್‌ವರ್ಡ್ ಅನ್ನು ನಮೂದಿಸುವ ಮೊದಲು, ಸೈಟ್‌ನ URL ಮತ್ತು ನೀವು ಹುಡುಕುತ್ತಿರುವ ಉತ್ಪನ್ನ ಅಥವಾ ಕಂಪನಿಯ ಹೆಸರು ಮತ್ತು ಮಾಹಿತಿ ತಾಳೆಯಾಗುತ್ತದೆಯೇ ಎಂದು ನೋಡಿ.

## ಸಲಹೆ 2

**ಸುರಕ್ಷಿತ ವೆಬ್‌ಸೈಟ್‌ಗಳನ್ನು ಬಳಸಿ.**

ವೆಬ್‌ಸೈಟ್‌ನ URL, https:// ಎಂದು ಆರಂಭವಾಗುತ್ತದೆ ಮತ್ತು ಅದರ ಎಡಕ್ಕೆ ಹಸಿರು ಪ್ಯಾಡ್‌ಲಾಕ್ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಉದಾಹರಣೆ: https://www.donutsandmoreshop.com

## ಸಲಹೆ 3

**ಸ್ಕ್ಯಾಮ್‌ಗಳಿಗೆ ಬಲಿಯಾಗಬೇಡಿ.**

ಕೈತುಂಬಾ ಹಣ ಗಳಿಸುವ ಅವಕಾಶವನ್ನು ಒದಗಿಸುತ್ತೇವೆ ಎಂದು ಭರವಸೆ ನೀಡುವಂತಹ, ನಿಜವಿರಲು ಸಾಧ್ಯವಿಲ್ಲ ಎಂಬಷ್ಟು ಒಳ್ಳೆಯ ಭರವಸೆಯನ್ನು ಒಂದು ಇಮೇಲ್ ಅಥವಾ ಸೈಟ್ ನೀಡುತ್ತಿದೆ ಎಂದಾದರೆ, ಅದು ಬಹುತೇಕ ಮಟ್ಟಿಗೆ ನಿಜವಿರಲಾರದು. ನಕಲಿ ಸಂದೇಶಕ್ಕೆ ಮರುಳಾಗಿ ಮೋಸಹೋಗಬೇಡಿ.

## ಸಲಹೆ 4

**ಈ ಪರಿಸ್ಥಿತಿ ಯಾರಿಗೂ ಬರಬಹುದು.**

ನೀವು ಆನ್‌ಲೈನ್‌ನಲ್ಲಿ ಯಾವುದೇ ಸ್ಕ್ಯಾಮ್‌ನಿಂದಾಗಿ ಮೋಸಹೋದರೆ, ನಿಮ್ಮ ತಂದೆ-ತಾಯಿ, ಶಿಕ್ಷಕರು ಅಥವಾ ವಿಶ್ವಾಸಾರ್ಹ ಹಿರಿಯರಿಗೆ ತಕ್ಷಣವೇ ತಿಳಿಸಿ ಮತ್ತು ನಿಮ್ಮ ಖಾತೆಗಳ ಪಾಸ್‌ವರ್ಡ್‌ಗಳನ್ನು ಕೂಡಲೇ ಬದಲಾಯಿಸಿ.

## ಸಲಹೆ 5


**ಗಮನಿಸಿ! ನಿಮ್ಮ ಸಾಧನದಲ್ಲಿ ಏನಾದರೂ ಸಮಸ್ಯೆಯಿದೆಯೇ ಎಂಬುದನ್ನು ಒಂದು ವೆಬ್‌ಸೈಟ್ ಅಥವಾ ಒಂದು ಜಾಹೀರಾತು ಹೇಳಲು ಸಾಧ್ಯವಿಲ್ಲ!**

ನಿಮ್ಮ ಸಾಧನದಲ್ಲಿ ಏನೋ ಸಮಸ್ಯೆಯಿದೆ ಎಂದು ಹೇಳುವ ಮೂಲಕ ಮಾಲ್‌ವೇರ್ ಅಥವಾ ಅನಪೇಕ್ಷಿತ ಸಾಫ್ಟ್‌ವೇರ್ ಅನ್ನು ಡೌನ್‌ಲೋಡ್ ಮಾಡುವ ಹಾಗೆ ನಿಮ್ಮನ್ನು ಮೋಸಗೊಳಿಸಲು ಪ್ರಯತ್ನಿಸುವ ಸ್ಕ್ಯಾಮ್‌ಗಳಿವೆ.

# Be Internet

# Kind

ನೀವು ಆನ್‌ಲೈನ್‌ನಲ್ಲಿ ಕರುಣಾಳು ಆಗಿರಲು ಸಹಾಯ
ಮಾಡುವುದಕ್ಕಾಗಿ ಸಲಹೆಗಳು



## ಸಲಹೆ 1

**ಅದ್ವಿತೀಯ ಸೂತ್ರವನ್ನು ಅನುಸರಿಸಿ!**


ಆನ್‌ಲೈನ್‌ನಲ್ಲಿ ಮತ್ತು ನಿಜ ಜೀವನದಲ್ಲಿಯೂ ಸಹ, ಇತರರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ಬಯಸುತ್ತೀರೋ, ನೀವೂ ಕೂಡಾ ಇತರರೊಂದಿಗೆ ಅದೇ ರೀತಿ ನಡೆದುಕೊಳ್ಳಿ. ಉದಾಹರಣೆ: ಕಿರುಕುಳದ ಕುರಿತು ವರದಿ ಮಾಡಿ. ತಂದೆ-ತಾಯಿ, ಶಿಕ್ಷಕರು ಅಥವಾ ಶಾಲಾ ಕೌನ್ಸೆಲರ್‌ನ ಹಾಗೆ, ಸಹಾಯ ಮಾಡಲು ಸಾಧ್ಯವಿರುವವರಿಗೆ ವಿಷಯ ತಿಳಿಸಿ.

## ಸಲಹೆ 2

**ಸಮರ್ಥಕರಾಗಿ!**

ಸಮರ್ಥಕರು, ಕೆಟ್ಟ ವರ್ತನೆಯ ವಿರುದ್ಧ ಹೋರಾಡುತ್ತಾರೆ ಮತ್ತು ಕರುಣೆ ಹಾಗೂ ಸಕಾರಾತ್ಮಕತೆಗಾಗಿ ಧ್ವನಿ ಎತ್ತುತ್ತಾರೆ. ಉದಾಹರಣೆ: ಕಿರುಕುಳದ ಕುರಿತು ವರದಿ ಮಾಡಿ. ತಂದೆ-ತಾಯಿ, ಶಿಕ್ಷಕರು ಅಥವಾ ಶಾಲಾ ಕೌನ್ಸೆಲರ್‌ನ ಹಾಗೆ, ಸಹಾಯ ಮಾಡಲು ಸಾಧ್ಯವಿರುವವರಿಗೆ ವಿಷಯ ತಿಳಿಸಿ.

## ಸಲಹೆ 3



**ನಕಾರಾತ್ಮಕ ಸಂವಹನಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸಲು ಸರಳ ಕ್ರಮಗಳನ್ನು ಕೈಗೊಳ್ಳಿ.**

ಉದಾಹರಣೆ: ಯಾರಾದರೂ ಆನ್‌ಲೈನ್‌ನಲ್ಲಿ ಒಬ್ಬ ಸ್ನೇಹಿತರ ಬಗ್ಗೆ ನಕಾರಾತ್ಮಕವಾದ ಸಂಗತಿಯನ್ನು ಪೋಸ್ಟ್ ಮಾಡಿದರೆ, ಒಂದಿಷ್ಟು ಸ್ನೇಹಿತರನ್ನು ಜೊತೆಗೆ ಸೇರಿಸಿಕೊಂಡು "ಕರುಣೆಯ ಮಹಾಪೂರವನ್ನು" ಹರಿಸಿ - ಅಂದರೆ, ಬೆದರಿಕೆಯನ್ನು ಎದುರಿಸುತ್ತಿರುವ ವ್ಯಕ್ತಿಯ ಕುರಿತಾಗಿ ಹಲವಾರು ಒಳ್ಳೆಯ ಕಾಮೆಂಟ್‌ಗಳನ್ನು ಪೋಸ್ಟ್ ಮಾಡಿ (ಆದರೆ ದಾಳಿಕೋರರ ಕುರಿತು ಏನೂ ಕೆಟ್ಟದ್ದನ್ನು ಹೇಳಬೇಡಿ, ಏಕೆಂದರೆ ನೀವು ಒಂದು ಮಾದರಿಯಾಗುತ್ತಿದ್ದೀರಿ, ಪ್ರತೀಕಾರ ಪಡೆಯುತ್ತಿಲ್ಲ)

## ಸಲಹೆ 4

**ಯಾವುದನ್ನು ಹೇಳಬೇಕು ಮತ್ತು ಹೇಗೆ ಹೇಳಬೇಕು ಎಂಬುದನ್ನು ಆಯ್ಕೆ ಮಾಡುವಾಗ, ಉತ್ತಮ ನಿರ್ಧಾರಗಳನ್ನು ಕೈಗೊಳ್ಳಿ.**

ಉದಾಹರಣೆ: ನೀವು ಯಾವ ಮಾತನ್ನು ನಿಜ ಜೀವನದಲ್ಲಿ ಹೇಳುವುದಿಲ್ಲವೋ, ಅದನ್ನು ಆನ್‌ಲೈನ್‌ನಲ್ಲಿ ಟೈಪ್ ಮಾಡಲು ಹೋಗಬೇಡಿ.


## ಸಲಹೆ 5

**ಆನ್‌ಲೈನ್‌ನಲ್ಲಿ ಕರುಣೆಯನ್ನು ಪಸರಿಸಿ.**

Be Internet

# Brave

ನೀವು ಆನ್‌ಲೈನ್‌ನಲ್ಲಿ ಧೈರ್ಯಶಾಲಿಯಾಗಿರಲು ಮಾಡುವುದಕ್ಕಾಗಿ ಸಲಹೆಗಳು



## ಸಲಹೆ 1

**ನಕಾರಾತ್ಮಕವಾದ ವಿಷಯವೇನಾದರೂ ಕಂಡುಬಂದಿತೇ? ಮಾತನಾಡಿ!**

ನಿಮಗೆ ಅಹಿತ ಅಥವಾ ಅಸಮಾಧಾನ ಉಂಟುಮಾಡುವ ಯಾವುದೇ ಸಂಗತಿ ಎದುರಾದರೆ, ಅದರ ಕುರಿತು ವರದಿ ಮಾಡಿ - ಧೈರ್ಯದಿಂದ ಮುಂದುವರೆಯಿರಿ ಮತ್ತು ಶಿಕ್ಷಕರು, ಪ್ರಿನ್ಸಿಪಾಲ್ ಅಥವಾ ತಂದೆ-ತಾಯಿಯೂ ಸೇರಿದ ಹಾಗೆ ಸಹಾಯ ಮಾಡಲು ಸಾಧ್ಯವಿರುವ ವ್ಯಕ್ತಿಯೊಂದಿಗೆ ಮಾತನಾಡಿ.

## ಸಲಹೆ 2

**ಮಾತನಾಡಿ ಬಗೆಹರಿಸಿಕೊಳ್ಳಿ.**

ಏನು ಮಾಡಬೇಕೆಂದು ನಿಮಗೆ ತೋಚದಿದ್ದಾಗ, ಸಹಾಯ ಕೇಳುವುದು ಧೈರ್ಯದ ಸಂಗತಿಯಾಗಿದೆ. ನಿಮಗೆ ಅಥವಾ ಇತರರಿಗೆ ಉಂಟಾದ ಯಾವುದೋ ನೋವಿನ ಸಂಗತಿಯನ್ನು ಪರಿಹರಿಸಲು ಅಥವಾ ಹಾನಿ ಉಂಟಾಗದ ಹಾಗೆ ತಡೆಯಲು ನೀವು ಇದನ್ನು ಮಾಡಿದರೆ, ಅದು ಜಾಣತನವೂ ಹೌದು, ಧೈರ್ಯದ ಕೆಲಸವೂ ಹೌದು.

## ಸಲಹೆ 3

**ಅನುಚಿತ ಕಂಟೆಂಟ್‌ನ ಕುರಿತು ವರದಿ ಮಾಡಿ ಮತ್ತು/ಅಥವಾ ಅದನ್ನು ನಿರ್ಬಂಧಿಸಿ.**

ಒಂದು ಸೈಟ್ ಅಥವಾ ಆ್ಯಪ್‌ನಲ್ಲಿ ನಿರ್ಬಂಧಿಸಲು ಮತ್ತು/ಅಥವಾ ವರದಿ ಮಾಡಲು ಇರುವ ಪರಿಕರಗಳನ್ನು ಬಳಸಿಕೊಂಡು ನಾವು ವರದಿ ಮಾಡಿದರೆ, ಆ ಪ್ರಕರಣದಲ್ಲಿ ಒಳಗೊಂಡಿರುವ ಜನರಿಗೆ, ಅವರ ಸಮುದಾಯಕ್ಕೆ ಮತ್ತು ಪ್ಲಾಟ್‌ಫಾರ್ಮ್‌ಗಳಿಗೂ ನೆರವಾಗಬಹುದು.

## ಸಲಹೆ 4

**ಪುರಾವೆಯನ್ನು ಪಡೆಯಿರಿ.**

ಅನುಚಿತ ಕಂಟೆಂಟ್ ಅನ್ನು ನಿರ್ಬಂಧಿಸುವ ಅಥವಾ ವರದಿ ಮಾಡುವ ಮೊದಲು, ಸನ್ನಿವೇಶದ ಕುರಿತು ನಿಮ್ಮ ಬಳಿ ದಾಖಲೆ ಇರುವಂತೆ ನೋಡಿಕೊಳ್ಳಲು ಅದರ ಸ್ಕ್ರೀನ್‌ಶಾಟ್ ತೆಗೆದುಕೊಳ್ಳುವುದು ಒಳ್ಳೆಯದು.

## ಸಲಹೆ 5

**ಹೆದರಬೇಡಿ!**

ನೀವು ಅಪರಿಚಿತರಿಂದ ಒಂದು ಸಂದೇಹಾಸ್ಪದ ಸಂದೇಶ ಅಥವಾ ಕಾಮೆಂಟ್ ಅನ್ನು ಸ್ವೀಕರಿಸಿದರೆ, ವಿಶ್ವಾಸಾರ್ಹ ಹಿರಿಯರಿಗೆ ಅದನ್ನು ತೋರಿಸಿ, ಆ ವ್ಯಕ್ತಿಯನ್ನು ನಿರ್ಬಂಧಿಸಿ ಮತ್ತು ಅವರ ಬಗ್ಗೆ ವರದಿ ಮಾಡಿ.